ಕೆ.ಸಿ.ಡಿ.

# ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 5 ಸಂಪುಟ: 2 ಪುಟ: 1


## ಕರ್ನಾಟಕ ಕಲಾ ಮಹಾವಿದ್ಯಾಲಯಕ್ಕೆ ವಿಶ್ವವಿದ್ಯಾಲಯದ "ಎಎಎ" ಸಮಿತಿ ಭೇಟಿ



ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಾತಾತ್ಮಕ ಮೌಲ್ಯಮಾಪನ ಸಮಿತಿ (ಎಎಎ ಸಮಿತಿ) ಅಧ್ಯಕ್ಷರಾದ ಪ್ರೋ ಸಂದೀಪ ಶಾಸ್ತ್ರಿ ಮಾತನಾಡುತ್ತಿರುವದು.

ವಿದ್ಯಾರ್ಥಿಗಳಾಗಲಿ ಅಥವಾ ಶಿಕ್ಷಕರಾಗಲಿ ಕಾಲೇಜಿಗೆ ಬರುವಾಗ ಓಡುತ್ತಾಬರಬೇಕು ಮತ್ತು ಮನೆಗೆ ನಡೆಯುತ್ತಾ ಹೋಗಬೇಕು ಎಂದು ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಾತಾತ್ಮಕ ಮೌಲ್ಯಮಾಪನ ಸಮಿತಿ (ಎಎಎ ಸಮಿತಿ) ಅಧ್ಯಕ್ಷರಾದ ಪ್ರೋ ಸಂದೀಪ ಶಾಸ್ತ್ರಿ ಅವರು ಶಿಕ್ಷಕ-ರಿಗೆ ಕರೆ ನೀಡಿದರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯಕ್ಕೆ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಉದ್ದೇಶದ ಸಲುವಾಗಿ ಭೇಟಿ ನೀಡಿ ಶಿಕ್ಷಕ ವೃಂದವನ್ನು ಉದ್ದೇಶಿಸಿ ಮಾತನಾಡಿದರು. ಪತ್ರಿಯೊಬ್ಬ ಶಿಕ್ಷಕನಾದವನು ತನ್ನ ಶೈಕ್ಷಣಿಕ ಪ್ರಗತಿಯನ್ನು ತನ್ನ ಕ್ಷೇತ್ರದಲ್ಲಿ ಸಾಧಿಸಬೇಕಾದರೆ ಉತ್ತಮ ಸಂಶೊಧಕರಾಗಿ ತಮ್ಮ ಸಂಶೋಧನಾ ಲೇಖನಗಳನ್ನು ಅಂತರಾಷ್ಟ್ರೀಯ ದರ್ಜೆಯ ಜರ್ನಲ್‌ಗಳಲ್ಲಿ ಪ್ರಕಟವಾದಾಗ ಮಾತ್ರ ಅವನು ಒಬ್ಬ ಪರಿಪೂರ್ಣ ಶಿಕ್ಷಕನಾಗುತ್ತಾನೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್. ಎಸ್. ಕಟ್ಟಿಮನಿ ಸಮಿತಿ ಅಧ್ಯಕ್ಷ ಮತ್ತು ಸದಸ್ಯರನ್ನು ಸ್ವಾಗತಿಸಿ ಕಾಲೇಜಿನ ಎಲ್ಲ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳ ಬಗ್ಗೆ ಸಮೀತಿಗೆ ಮಾಹಿತಿ ನೀಡಿದರು. ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರಾದ ಡಾ. ಎಸ್. ಆರ್. ಗಣಿ ಅವರು ಪವರ್ ಪಾಯಿಂಟ್ ಪ್ರಸ್ತುತಿ ಮೂಲಕ ಕಾಲೇಜಿನ ಎಲ್ಲ ಶೈಕ್ಷಣಿಕ ಮತ್ತು ಆಡಳಿತಾತ್ಮಕವಾದ ಅಂಶಗಳ ಬಗ್ಗೆ ಸಮಿತಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಉಪಪ್ರಾಚಾರ್ಯರಾದ ರಾಜೇಶ್ವರಿ ಮಹೇಶ್ವರಯ್ಯ ಮತ್ತು ವಿವಿಧ ವಿಭಾಗದ ಪ್ರಾಧಾಪಕರುಗಳಾದ ಡಾ. ಬಿ. ಎಫ್ ಚಾಕುಲಬ್ಬಿ, ಡಾ. ವಾಚ್ಯ್ ಆರ್. ಯಾರ್ದಿ ಮತ್ತು ವಿವಿಧ ವಿಭಾಗಗಳ ಅಧ್ಯಕ್ಷರು ಹಾಜರಿದ್ದರು.

ಸಮಿತಿ ಸದಸ್ಯರಾದ ಡಾ. ಆರ್. ಇಂದಿರಾ ಮತ್ತು ಪ್ರೋ. ಪಿ. ಎಫ್. ಕುಲಕರ್ಣಿ ಕಾಲೇಜಿನ ವಿದ್ಯಾರ್ಥಿಗಳ ಜೊತೆಗೆ ಸಂವಾದ ನಡೆಸಿದರು.

-ಶಿಲ್ಪಾ
5ನೇ ಸೆಮಿಸ್ಟರ್

## 'Skill Development in Karnatak University'



Karnatak Arts College former Principal Professor Usha Murthy addressed to the students.

Karnatak University Skill Development Centre on oct 3 formally started its second programme to train students of under-graduate classes studying in Karnatak College in B.B.A, B.Com, B.Com (CS), B.T.A courses in soft skills. The classes began in the faculty building with nearly 40 students attending this batch. Principal Prof. S. S. Kattimani has been in the forefront to help the SDC and had made all he arrangements required for the course including arranging for the coordinator Prof. A.R.Yardi for the programme, keeping the staff necessary at the language lab to assist the skill development programme trainers. Prof. Kattimani is keen on extending this activity to all the students of his college and has taken pivotal role in educating the students on the usefulness of skill development. Prof. Usha Murthy, formerly principal of the Karnatak Arts College and a Member of the Syndicate of Karnatak University who is currently a Member of the Core Committee of SDC was also present along with Smt.Vandana Kelageri also a Member of the SDC Core Committee. SDC staff members were present to take care of the logistics. The lectures for today covered the areas of Introduction to Programme-Aspects of Communication, Introduction to Functional English and were of one and half hour each. The course will go on for 25 days with one day break for Vijayadashami i.e on the October 12, 2016. After completion of the course, students who have attended all the 25 days of the course will be issued certificates. 100% attendance is compulsory for this course.

-Nivedita
5th semester

**Kcd Weekly : Treat prople like mirrors and watch how you reflect in their eyes.**

## "ಯುವ ತರಬೇತಿ ಶಿಬಿರ ರಾಷ್ಟ್ರಕ್ಕೆ ಪ್ರಥಮ ಸ್ಥಾನ"



ಟ್ರೋಫಿಯೊಂದಿಗೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿ ಕುಲಸಚಿವ ಪ್ರೊ. ಎಂ ಎನ್ ಜೋಶಿ, ಕರ್ನಾಟಕ ಕಲಾ ಮಹಾವಿದ್ಯಾಲಯದ ಯುತ್ ರೆಡ್ ಕ್ರಾಸ್ ಸಂಸ್ಥೆಯ ಸಮಾಲೋಚಕ ಡಾ ಸುಬ್ಮಣ್ಯ ಭಟ್ ವಿಶ್ವ ವಿದ್ಯಾಲಯದ ರೆಡ್ ಕ್ರಾಸ ಅಧಿಕಾರಿ ಡಾ ಎಸ್ ಸಿ ಚಲುವಾದಿ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ರೆಡ್ ಕ್ರಾಸ್‌ನ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಸ್ಟೇಲ್ಲಾ ಸ್ಟಿವನ್ ಡಾ ವಾಮದೇವ ಟಿ.ಹೆಚ್ ಚಿತ್ರದಲ್ಲಿ ಇದ್ದಾರೆ.

ಕರ್ನಾಟಕ ಕಲಾ ಮಹಾವಿದ್ಯಾಲಯದ ಯುತ್ ರೆಡ್ ಕ್ರಾಸ ಸಂಸ್ಥೆಯ ಘಟಕದ, ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಕಲಾ ಮಹಾವಿದ್ಯಾಲಯದ ಕರ್ನಾಟಕ ರಾಜ್ಯ ಶಾಖೆಯ ಭಾರತೀಯ ರೆಡ್ ಕ್ರಾಸ್ ಸೊಸೈಟಿಯು ಅಕ್ಟೋಬರ್ 18 ರಿಂದ 24 ವರೆಗೆ ಹರಿಯಾಣಾದ ಪಂಚಕೋಳದಲ್ಲಿ ಆಯೋಜಿಸಿದ ರಾಷ್ಟ್ರಮಟ್ಟದ ಯುತ್ ರೆಡ್‌ಕ್ರಾಸ್ ತರಬೇತಿ ಶೀರದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಎ ಮತ್ತು ಸಮಾಜಕಾರ್ಯದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ದತ್ತನಿರಂಜನ್ ಮತ್ತು ಅಭಿಷೇಕ.ಸಿ ಎಂ ಬಿ ಶ್ರೀಧರ್ ಮತ್ತು ಮುರಳಿಧರ ದೊಡಮನಿ ಇವರು ಸೋಲೋ ಗಾಯನ, ಸೋಲೋ ನೃತ್ಯ, ರಸಪ್ರಶ್ನೆ ಮತ್ತು ಸಮೂಹ ಗಾಯನ ಈ ಎಲ್ಲ ಸ್ಪರ್ಧೆಗಳಲ್ಲಿ ರಾಷ್ಟ್ರಕ್ಕೆ ಪ್ರಥಮ ಸ್ಥಾನ ಗಳಿಸಿ ಪ್ರಶಸ್ತಿಯನ್ನು ಪಡೆದಿದಾರೆ. ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿ ಕುಲಸಚಿವ ಪ್ರೊ. ಎಂ ಎನ್ ಜೋಶಿ, ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್ ಎಸ್ ಕಟ್ಟಿಮನಿ ಮತ್ತು ಉಪ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ, ಕರ್ನಾಟಕ ಕಲಾ ಮಹಾವಿದ್ಯಾಲಯದ ಯುತ್ ರೆಡ್‌ಕ್ರಾಸ್‌ನ ಕಾರ್ಯಕ್ರಮ ಅಧಿಕಾರಿಗಳಾದ ಡಾ ವಾಮದೇವ ಹೆಚ್ ಟಿ ಮತ್ತು ಡಾ. ಸ್ಟೇಲಾ ಸ್ಟಿವನ್ ವಿದ್ಯಾರ್ಥಿಗಳಿಗೆ ಶುಭ ಕೋರಿದ್ದಾರೆ.

-ಕುಮಾರ್
3ನೇ ಸೆಮಿಸ್ಟರ್

## "ಜಸ್ಟ್ ಒಂದು ಮಾತು"

**ಶ್ರದ್ಧೆ, ಸಹನೆ, ಸತತ ಪ್ರಯತ್ನ ಜಯ ಸಾಧಿಸಲು ಅಗತ್ಯವಾಗಿ ಬೇಕಾದ ಮೂರು ಸಾಧನಗಳು ಇದರ ಜೊತೆಗೆ ಆತ್ಮವಿಶ್ವಾಸ ಇದ್ದರೆ ಮಾತ್ರವೇ ವಿಜಯಲಕ್ಷ್ಮಿ ಒಲಿಯುತ್ತಾಳೆ.**

-ಸ್ವಾಮಿ ವಿವೇಕಾನಂದ


ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್,ವಿದ್ಯಾರ್ಥಿ ಸಂಪಾದಕರು: ಅಭಿಷೇಕ್,ಅಂಕಿತ. ಪುಟ ವಿನ್ಯಾಸ: ಶ್ರೀಹರಿ.